ದರಗಣಬೆ, ಬೇರಣಬೆ, ಕೂಗಾನು ಕುಕ್ಕರೆ ಏಳುತ್ತವೆ ಎಂದು ಜಾಗ ಗುರುತಿಟ್ಟುಕೊಂಡು ಮಳೆ ಗಾಳಿಯ ಅಬ್ಬರ ಲೆಕ್ಕಿಸದೆ ಗೊಂಡಾರಣ್ಯದೊಳಗೆ ನುಗ್ಗಿ ಅವುಗಳನ್ನು ಮೂಟೆ ಗಟ್ಟಲೆ ಹೊತ್ತು ತಂದು ಗೌಡರ ಮನೆಗೆ ಸುರಿಯುತ್ತಿದ್ದ.

ಹೊಳೆ ಬದಿಯ ಬಂಡೆಯ ಸಮೀಪ ಕೋಳಿ ಕರುಳು ಕಟ್ಟಿ ಅದರ ವಾಸನೆಗೆ ನೀರೊಳಗಿನಿಂದ ಹಿಂಡು ಹಿಂಡಾಗಿ ಹರಿದು ಬರುತ್ತಿದ್ದ ಕಲ್ಲೇಡಿಗಳನ್ನು ಕೊಂಬು ಮುರಿದು ಕುಕ್ಕೆ ತುಂಬಾ ತರುತ್ತಿದ್ದ.

ವರಮಾನ ವೃದ್ಧಿಯ ವಿಚಾರದಲ್ಲಿದ್ದಂತೆಯೇ, ಈ ವಿಶೇಷ ಖಾದ್ಯ ಪದಾರ್ಥಗಳ ಸಮೃದ್ಧಿಗಾಗಿಯೂ ದುಮ್ಮ, ಗೌಡರ ಮನೆಯವರಿಗೆ ಇಷ್ಟದವನಾಗಿಬಿಟ್ಟಿದ್ದ.

ಹೀಗೆಯೇ ನೆಮ್ಮದಿಯ ಬದುಕು ಸಾಗುತ್ತಿರಬೇಕಾದರೆ...



ಒಂದು ದಿನ ರಾತ್ರಿ ಅಕ್ಕಣಿ ಗುಡ್ಲಿಗೆ ಬರಲಿಲ್ಲ. ರಾತ್ರಿಯೆಲ್ಲಾ ಗಾಬರಿ ಆತಂಕಗಳಿಂದ ಕಾದ ದುಮ್ಮ ಬೆಳಗಾಗಿ ಗುಡ್ಲಿನಿಂದ ಹೊರಬಂದ. ಮೇಲಿನ ಕಾಡಿನ ಬಸರಿ ಮರದ ಕಡೆಗೆ ದುಮ್ಮನ ನಾಯಿ ಟೈಗರ್ ಬೊಗಳುತ್ತ ಓಡಿ ಹೋಗಿ ಮತ್ತೆ ಗುಡಿಸಲಿನ ಕಡೆ ಹಿಂತಿರುಗಿ ಓಡಿ ಬರುತ್ತಿತ್ತು. ಮೊದಲೆ ಗಾಬರಿಯಿಂದಿದ್ದ ದುಮ್ಮನ ಮನಸ್ಸಿನಲ್ಲಿ ಭಯ ತುಂಬಿಕೊಂಡಿತು. ಕಾಡಿನ ಏರು ದಾರಿಯಲ್ಲಿ ಓಡುತ್ತಲೇ ಬಸರಿ ಮರದ ಬುಡಕ್ಕೆ ಬಂದ.

ಅಲ್ಲಿನ ದೃಶ್ಯ ಕಂಡು ದುಮ್ಮನ ಎದೆ ಝಲ್ಲೆಂದಿತು. ಹಿಂದಿನ ತಿಂಗಳಷ್ಟೇ ಗೌಡರ ಹೆಣ್ಣು ಹಂದಿ ಮರಿ ಹಾಕಿದ್ದ ಮರದ ಬುಡದಲ್ಲಿ ಅಕ್ಕಣಿ ಮಲಗಿದ್ದಾಳೆ. ಪಕ್ಕದಲ್ಲೊಂದು ಪುಟಾಣಿ ಕೂಸು. ಆಗಾಗ ಅಳುತ್ತಾ ಹಕ್ಕಿಯಂತೆ ಬಾಯಿ ಬಿಡುತ್ತಿದೆ.

ಅವನಿಗೆ ಏನು ಮಾಡಬೇಕೆಂದು ತೋಚಲಿಲ್ಲ ಬೊಬ್ಬೆಹಾಕುತ್ತ ಹಿಂತಿರುಗಿ ಕಾಡಿನಿಂದ ಹೊರ ಬಂದ. ಕೆಳಗಿನ ಗದ್ದೆಯಲ್ಲಿದ್ದ ಜನರಿಗೆ ಸುದ್ದಿ ಮುಟ್ಟಿತು. ಒಂದು ಬಗೆಯ ವಿಸ್ಮಯದ ವಾತಾವರಣ ಸೃಷ್ಟಿಯಾಯಿತು.

ಊರೊಳಗಿಂದಲೂ ಗಂಡಸರು, ಹೆಂಗಸರು ಮಕ್ಕಳೆನ್ನದೆ ಈ ವಿಸ್ಮಯವನ್ನು ನೋಡಲು ಜನರು ಓಡಿ ಬಂದರು. ಗೌಡರೂ ಬಂದು ಒಂದು ಕ್ಷಣ ಕಾಲ ನಿಂತು ಏನೂ ಮಾತಾಡದೇ ಹೊರಟು ಹೋದರು.

'ಈ ಹೆಣ್ಣಿಗೆ ಏನು ಬಂದಿತ್ತು ಕೇಡು?' ಎಂದು ಕೆಲವರು ದೂರಿದರು.

'ಇದು ಗೌಡರದೇ ಕೆಲಸ' ಎಂದು ಕೆಲವರು ಪಿಸುಗುಟ್ಟಿದ್ದರು.

'ಪಾಪ ಅವರಾದರೂ ಏನು ಮಾಡುತ್ತಾರೆ... ಆ ದಮ್ಮು ರೋಗದ ಹೆಂಡತಿ ಕಟ್ಟಿಕೊಂಡು' ಎಂದು ಇನ್ನು ಕೆಲವರು ಕನಿಕರ ವ್ಯಕ್ತಪಡಿಸಿದರು.

ಮಧ್ಯಾಹ್ನದ ವೇಳೆಗೆ ಗೌಡತಿ ಏದುಸಿರು ಬಿಡುತ್ತಾ ಓಡೋಡಿ ಬಂದು ಬಸರಿ ಮರದ ಬುಡದಲ್ಲಿ ಕುಸಿದು ಕುಳಿತರು.



ಸುಧಾರಿಸಿಕೊಂಡು ನೋಡುತ್ತಾರೆ. ಪಕ್ಕದ ಮರದ ಕೊಂಬೆಯಲ್ಲಿ ಕಟ್ಟಿದ ಗೂಡಿನಿಂದ ಇಳಿದು ಬಂದ ಚಿಗಳಿ(ಕೆಂಪಿರುವೆ)ಗಳು ಹಸುಗೂಸಿನ ಎಳೆ ಚರ್ಮವನ್ನು ಕಚ್ಚಿ ಎಳೆಯುತ್ತಿವೆ.

ಯಾರನ್ನೋ ಮನೆಗೆ ಓಡಿಸಿ ಒಂದು ಕೌದಿ, ಚಾಪೆ ಹಾಗೂ ಇರುವೆ ಔಷಧಿಯನ್ನು ತರಿಸಿದರು.

ಗಿಡದ ಕೊಂಬೆಯೊಂದನ್ನು ಮುರಿದು ಬರಲಿನಂತೆ ಮಾಡಿ ಒಂದೆಡೆ ನೆಲಗುಡಿಸಿ ಚಾಪೆ ಹಾಸಿ ಅದರ ಮೇಲೆ ಬಾಣಂತಿಯನ್ನು ಮಲಗಿಸಿದರು. ಮಗುವನ್ನು ಎತ್ತಿ ಹಿಡಿದು ಕಚ್ಚಿಹಿಡಿದಿದ್ದ ಚಿಗಳಿಗಳನ್ನು ಬಿಡಿಸಿದರು. ಚಿಗಳಿಗಳು ಆಗಲೇ ಎಳೆ ಚರ್ಮವನ್ನು ಕಚ್ಚಿ ಗಾಸಿ